# ರಾಧಿಕಾ ರಾಣಿ

## 'ಉಮೆ'

ಮೂಲ : 'Swami Vivekananda: The Great Inspirer', ರಾಮಕೃಷ್ಣ ಶಾರದಾ ಮಿಷನ್ ಪ್ರಕಟಣೆ
ಅನುವಾದ : ಸ್ವರ್ಣಗೌರಿ

ಒಂದು ದಿನ ಬೆಳಗ್ಗೆ ಕ್ಷೀರಭವಾನಿಯ ಮಂದಿರದಲ್ಲಿ ಯುವ ಸಂನ್ಯಾಸಿಯೊಬ್ಬ ಗಾಢವಾದ ಧ್ಯಾನದಲ್ಲಿ ಲೀನವಾಗಿದ್ದುದನ್ನು ಕಂಡು ಸ್ವಾಮಿ ರಾಮ್‌ಜೀ (ಕಾಶ್ಮೀರದ ಮಹಾನ್ ಶಿವಯೋಗಿ) ನೆರೆಹೊರೆಯಲ್ಲಿ ವಿಚಾರಿಸಲು, ಆ ಪ್ರಶಾಂತ ಮೊಗದ ಯುವ ಸಂನ್ಯಾಸಿಯು ಹಿಂದಿನ ದಿನ ಸಂಜೆಯಿಂದಲೂ ಹಾಗೆಯೇ ಅಲುಗಾಡದೆ ನಿಶ್ಚಲನಾಗಿ ಕುಳಿತಿರುವನೆಂದು ತಿಳಿದು ಬಂತು. ತಾಯಿ ಜಗನ್ಮಾತೆಗೆ ನಿವೇದಿಸಿದ ಕ್ಷೀರವನ್ನು ತರಿಸಿ ಆ ಯುವ ಸಂನ್ಯಾಸಿಯ ಮುಂದಿಟ್ಟು ಸ್ವಾಮಿ ರಾಮ್‌ಜೀ ಶಿವನನ್ನು ಕುರಿತಾದ ಸ್ತೋತ್ರಗಳನ್ನು ಹಾಡತೊಡಗಿದರು. ಬಹಳ ಹೊತ್ತಿನ ನಂತರ ಆ ಯುವ ಸಂನ್ಯಾಸಿ ಕಣ್ಣು ತೆರೆದಾಗ ಸ್ವಾಮಿ ರಾಮ್‌ಜೀ ಕರಜೋಡಿಸಿ ಕ್ಷೀರವನ್ನು ಸ್ವೀಕರಿಸಬೇಕೆಂದು ಪ್ರಾರ್ಥಿಸಿದರು. ಅದೇ ಸಮಯದಲ್ಲಿ ಪಂಡಿತ ಆನಂದ್‌ಜೂ ಧಾರ್‌ಜೀ ತಮ್ಮ ಎಂಟು ವರ್ಷ ವಯಸ್ಸಿನ ಮಗಳು 'ರಣೆನ್‌ಡೆಡ್'ಳೊಡನೆ ಅಲ್ಲಿಗೆ ಬಂದರು. ಸ್ವಾಮಿ ರಾಮ್‌ಜೀ, ಧಾರ್‌ನನ್ನು ಯುವ ಸಂನ್ಯಾಸಿಯ ಬಳಿಗೆ ಬರಲು ಕೈಸನ್ನೆ ಮಾಡಿದರು. ಧಾರ್ ಅವರ ಮಗಳನ್ನು ನೋಡಿದ ಆ ಸಂನ್ಯಾಸಿಯು ಆಕೆಯನ್ನು ಪೂಜಿಸುವ ಇಚ್ಛೆಯನ್ನು ಪ್ರಕಟಿಸಿ, ರಾಮ್‌ಜಿ ಅಭಿಪ್ರಾಯ ಕೇಳಿದರು. ಎಲ್ಲರೂ ಆನಂದದಿಂದ ಒಪ್ಪಿದರು. ಮಾರನೆ ದಿನ ದೇಗುಲದಲ್ಲಿ ಸಡಗರದ ವಾತಾವರಣ ಏರ್ಪಟ್ಟಿತು. ಪ್ರಾತಃಕಾಲ ಬ್ರಾಹ್ಮೀ ಮುಹೂರ್ತದಲ್ಲಿ ಸ್ವಾಮೀಜಿ ಆ ಬಾಲಕಿಯನ್ನು, ಸಾಕ್ಷಾತ್ **ಉಮೆ** ಎಂದು ಪೂಜಿಸಿದರು.

ಈ ಘಟನೆಯ ಒಂದೆರಡು ವರ್ಷಗಳ ತರುವಾಯ ರಣೆನ್‌ಡೆಡ್‌ಳು ವಿವಾಹವಾಗಿ ಗೃಹಸ್ಥ ಜೀವನಕ್ಕೆ ಕಾಲಿಟ್ಟಳು. ಪತಿಯ ಮನೆಯವರು ಆಕೆಯ ಹೆಸರನ್ನು ರಾಧಿಕಾರಾಣಿ ಎಂದು ಬದಲಿಸಿದರು. ಸ್ವಾಮಿ ವಿವೇಕಾನಂದರಿಂದ ಬಾಲ್ಯದಲ್ಲೇ ಪೂಜಿತಳಾದ ಕಾರಣ ಮುಂದೆ ತನ್ನ ಜೀವನದಲ್ಲಿ ಎದುರಾದ ಅವಘಡಗಳನ್ನೆಲ್ಲಾ ಶಾಂತಚಿತ್ತದಿಂದ ಎದುರಿಸುವ ಶಕ್ತಿ ಪಡೆದಿದ್ದಳು. ತನ್ನೆರಡು ಗಂಡು ಮಕ್ಕಳನ್ನು ಕಳೆದುಕೊಂಡಾಗ ಅವಳ ಶಾಂತಭಾವವನ್ನು ನೋಡಿದ ಜನ ಬೆರಗಾದರು. ಆಕೆ ಸದಾ ಶಾಂತಚಿತ್ತಳೂ, ಮೃದು ಮಾತಿನವಳೂ, ದಯಾಪರಳೂ, ಮಧುರಕಂಠದವಳೂ ಆಗಿದ್ದಳು. ಆಕೆಯ ಇಬ್ಬರು ಹೆಣ್ಣುಮಕ್ಕಳು – ಸಾರಿಕಾದೇವಿ ಹಾಗೂ ಪ್ರಭಾದೇವಿ ಸಂನ್ಯಾಸ ಜೀವನ ಸ್ವೀಕರಿಸಲು ತಾಯಿಯ ಅನುಮತಿ ಕೇಳಲು, ಹೆಮ್ಮೆಯಿಂದ ಇಬ್ಬರನ್ನು ಭಗವಂತನಿಗೆ ಸಮರ್ಪಿಸುವಲ್ಲಿ ರಾಧಿಕಾರಾಣಿ ತಲುಪಿದ ಉನ್ನತ ಆಧ್ಯಾತ್ಮಿಕ ಸ್ಥಿತಿಯನ್ನು ಊಹಿಸಬಹುದು. ಮಕ್ಕಳಿದ್ದೂ ಇಲ್ಲದಂತಿದ್ದ ರಾಧಿಕಾರಾಣಿ ನಿಜಕ್ಕೂ ಬಹು ದೊಡ್ಡ ಕರ್ಮಯೋಗಿಯೇ ಸರಿ. ತನ್ನ ಮನೆಯ ಬಳಿಯೇ ಇದ್ದ ಅನಾಥ ಮಕ್ಕಳ ಜವಾಬ್ದಾರಿಯನ್ನು ಸ್ವ-ಇಚ್ಛೆಯಿಂದ ಹೊತ್ತಳು. ತನ್ನೆಲ್ಲಾ ಧಾರ್ಮಿಕ ಕಾರ್ಯಕಲಾಪಗಳಲ್ಲಿ ತನ್ನ ಪತಿಯ ಮನೆಯವರ ಸಹಕಾರ ಹೇರಳವಾಗಿ ಪಡೆದ ಭಾಗ್ಯವಂತೆ ಈಕೆ. ಊರಿನ ಜನರೆಲ್ಲಾ ಆಕೆಯನ್ನು ಪ್ರೀತಿಯಿಂದ ಭಾಬೀಜೀ (ಅತ್ತಿಗೆ) ಎಂದು ಕರೆಯುತ್ತಿದ್ದರು.



ರಾಧಿಕಾರಾಣಿಯ ತಾಯಿ ಅರಣಿಮಲ್ ಧಾರ್ ಬಾಲ್ಯದಿಂದಲೇ ಭಗವದ್‌ಭಕ್ತಳಾಗಿದ್ದಳು. ಶಾಲಾ, ಕಾಲೇಜುಗಳಿಗೆ ಹೋಗಿ ವಿದ್ಯಾರ್ಜನೆ ಮಾಡುವ ಸುಯೋಗ ದೊರೆಯದಿದ್ದರೂ ಚುರುಕು ಬುದ್ಧಿಯವಳಾಗಿದ್ದಳು. ಸಾಧುಸಂತರ ಮೇಲೆ ವಿಶೇಷ ಶ್ರದ್ಧಾಭಕ್ತಿಗಳಿದ್ದವು. ನಿತ್ಯವೂ ಪೂಜೆ, ಜಪ, ಧ್ಯಾನ, ಉಪವಾಸ ಇತ್ಯಾದಿ ಧಾರ್ಮಿಕ ಕಾರ್ಯಗಳನ್ನು ಚಾಚೂ ತಪ್ಪದೆ ನಿಯತವಾಗಿ ಪಾಲಿಸುತ್ತಿದ್ದಳು. ಭಕ್ತಿಮತಿಯಾದ ಆಕೆ ಮನೆದೇವತೆ ಕ್ಷೀರಭವಾನಿಯ ಪೂಜೆಗೆ ಅಣಿಮಾಡುವುದರಲ್ಲೇ ಸದಾ ನಿರತಳಾಗಿರುತ್ತಿದ್ದಳು. ಪರಮಸಾತ್ತ್ವಿಕ ಶಿರೋಮಣಿಯಾದ ಆಕೆ ಉಪವಾಸ ವ್ರತದ ನಂತರ ಮೊದಲಿಗೆ ಸಾಧುಸಂತರಿಗೆ ಉಣಬಡಿಸಿ, ನಂತರ ತಾನು ಉಣ್ಣುತ್ತಿದ್ದಳು.

ಒಮ್ಮೆ ಸ್ವಾಮಿ ವಿವೇಕಾನಂದರನ್ನು ತನ್ನ ಮನೆಗೆ ಊಟಕ್ಕೆ ಆಹ್ವಾನಿಸಿದ್ದಳು. ಆದರೆ ಸ್ವಾಮೀಜಿ ಸಂಜೆ ತಡವಾಗಿ ಬಂದು ತಲುಪಿದರು. ಅಷ್ಟು ಹೊತ್ತಿಗಾಗಲೇ ಅನೇಕರು ಸ್ವಾಮೀಜಿಯವರ ದರ್ಶನಕ್ಕಾಗಿ ಕಾಯುತ್ತಿದ್ದರು. ಕಾಶ್ಮೀರದ ಪಂಡಿತರು ಶಿವನ ಆರಾಧಕರು. ಸ್ವಾಮೀಜಿ ಮನೆದೇವತೆಗೆ ಪ್ರಣಾಮ ಸಲ್ಲಿಸಿ, ಕಾಯುತ್ತಿದ್ದ ಪಂಡಿತರನ್ನು ಉದ್ದೇಶಿಸಿ ಮಾತನಾಡಲು ಉದ್ಯುಕ್ತರಾದರು. ನಂತರ ಎರಡು ಭಜನೆಗಳನ್ನು ಹಾಡಿದರು. ಅವರ ಅಗಾಧ ಜ್ಞಾನದ ಮುಂದೆ ಪಂಡಿತರ ಮಸ್ತಕಗಳು ತಾವೇ ತಾವಾಗಿ ಬಾಗಿದವು. ತಮ್ಮ ಭಕ್ತಿಗೌರವಗಳ ದ್ಯೋತಕವಾಗಿ ಯಥಾಶಕ್ತಿ ಕಾಣಿಕೆ ನೀಡಿ ಪ್ರಣಾಮ ಸಲ್ಲಿಸಿದರು. ತಮಗೆ ಬಂದ ಕಾಣಿಕೆಯನ್ನೆಲ್ಲಾ ಸ್ವಾಮೀಜಿ ರಾಮ್‌ಜೀ ನಡೆಸುತ್ತಿದ್ದ ಆಶ್ರಮದ ಸೇವಾ ಕಾರ್ಯಗಳಿಗೆ ನೀಡಿದರು.